(144ನೇ ಅಧಿವೇಶನದಲ್ಲಿ ದಿ: 14/9/2/00ರಂದು ಸದನದಲ್ಲಿ ಮಂಡಿಸಿದೆ)
ನಿ - 72, ಕ್ರ - 1

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಯು.ಬಿ.ವೆಂಕಟೇಶ್ ಇವರು ನಿಯಮ 72ರಡಿ ನೀಡಿರುವ ಸೂಚನೆಗೆ ಉತ್ತರ.**

**ಸೂಚನೆ**

ಬೆಂಗಳೂರಿನ ಬಸವನಗುಡಿಯ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತದಲ್ಲಿ ಘಟಿಸಿರುವ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಠೇವಣಿದಾರರು ಆತಂಕಕ್ಕೆ ಒಳಗಾಗಿದ್ದು ಈ ಸಂಬಂಧ ರಾಜ್ಯ ಸರ್ಕಾರ ಕೈಗೊಂಡಿರುವ ಕಾನೂನು ಕ್ರಮಗಳ ಬಗ್ಗೆ.

**ಉತ್ತರ**

ಶ್ರೀ. ಗುರುರಾಘವೇಂದ್ರ ಸಹಕಾರ ಬ್ಯಾಂಕ್ ನಿ., ಬೆಂಗಳೂರು ಈ ಬ್ಯಾಂಕ್ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿಯಲ್ಲಿ ದಿನಾಂಕ:12-04-1999ರಲ್ಲಿ ನೋಂದಣಿಗೊಂಡಿದೆ. ಬ್ಯಾಂಕಿನ ಕಾರ್ಯವ್ಯಾಪ್ತಿಯು ಬೆಂಗಳೂರು, ಬೆಂಗಳೂರು ಗ್ರಾಮಾಂತರ, ತುಮಕೂರು, ರಾಮನಗರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸೀಮಿತವಾಗಿದೆ ಹಾಗೂ ಬ್ಯಾಂಕಿಂಗ್ ರೆಗ್ಯೂಲೇಷನ್ ಅಧಿನಿಯಮ 1959 ರಡಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಬ್ಯಾಂಕಿಂಗ್ ಚಟುವಟಿಕೆ ಕೈಗೊಳ್ಳಲು ಪರವಾನಿಗೆ ಪಡೆದಿರುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕಿನವರು ಈ ಬ್ಯಾಂಕಿನ ಶಾಸನಾತ್ಮಕ ಪರಿವೀಕ್ಷಣೆ ಕೈಗೊಂಡ ಸಂದರ್ಭದಲ್ಲಿ ಗಂಭೀರ ಸ್ವರೂಪದ ಲೋಪದೋಷಗಳು ಕಂಡು ಬಂದಿರುತ್ತವೆ. ಅವುಗಳ ಸ್ಥೂಲ ಅಂಶ ಕೆಳಕಂಡಂತಿರುತ್ತದೆ.

1. ಬ್ಯಾಂಕ್ ಕೃತ್ರಿಮ (Artificial) ಠೇವಣಾತಿ ಸೃಷ್ಟಿಸಿರುವುದು, ಠೇವಣಾತಿದಾರರು ನೈಜವಾಗಿ ಇಲ್ಲದಿದ್ದರೂ ಅನ್ಯರ ಹೆಸರಿನಲ್ಲಿ ಠೇವಣಾತಿ ಮಾಡಿರುವುದು.
2. ರೂ.154443.84 ಲಕ್ಷ ಸಾಲ ಪ್ರಕರಣಗಳಿಗೆ ಸಂಬಂಧಿಸಿದಂತೆ 2876 ಸಾಲದ ಖಾತೆಗಳಿಗೆ ದಾಖಲೆಗಳು ಇಲ್ಲದಿರುವುದು.
3. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನ ಉಲ್ಲಂಘನೆ ಮಾಡಿ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರಿಗೆ ಸಾಲ ಮಂಜೂರು ಮಾಡಿರುವುದು.
4. ಸಾಲ ಮಂಜೂರಾತಿ ಪ್ರಾಧಿಕಾರ ಸಾಲವನ್ನು ಮಂಜೂರು ಮಾಡದಿದ್ದರೂ ಸಾಲದ ಹಣವನ್ನು ಬಿಡುಗಡೆ ಮಾಡಿರುವುದು.
5. 24 ಮುಖ್ಯ ಫಲಾನುಭವಿಗಳಿಗೆ (ಸಾಲಗಾರರಿಗೆ) ರೂ. 89285.26 ಲಕ್ಷ ಸಾಲ ಮಂಜೂರು ಮಾಡಿ ಹಣ ದುರುಪಯೋಗ ಮಾಡಿರುವುದು.
6. 1576 ಸಾಲದ ಖಾತೆಗಳಲ್ಲಿ 1274 ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲೆಗಳು/ಕಡತಗಳು ಇಲ್ಲದಿರುವುದು.
7. ಠೇವಣಾತಿ ಇಲ್ಲದಿದ್ದರೂ ಠೇವಣಾತಿ ಇದೆ ಎಂದು ಸಾಲ ಮಂಜೂರು ಮಾಡಿರುವುದು.
8. ಠೇವಣಾತಿದಾರರ ಒಪ್ಪಿಗೆ ಅಥವಾ ಸಹಮತಿ ಇಲ್ಲದೇ ಒಪ್ಪಿಗೆ ನೀಡದವರ ಹೆಸರಿನಲ್ಲಿ ಠೇವಣಾತಿ ಸಾಲ ನೀಡಿರುವುದು.
9. ಆದಾಯ ಗುರುತಿಸುವಿಕೆ-ಆಸ್ತಿ ವರ್ಗೀಕರಣ (Income Recognition and Asset Classification Norms) (IRAC-NORMS) ನಿಯಮಗಳನ್ನು ಪಾಲಿಸದೇ ಸ್ಪಷ್ಟವಾಗಿ ಕಾನೂನು ಉಲ್ಲಂಘನೆ ಮಾಡಿ ವಾಸ್ತವಾಂಶವನ್ನು ಮರೆಮಾಚಿರುವುದು.

2..

ಭಾರತೀಯ ರಿಸರ್ವ್ ಬ್ಯಾಂಕ್ ಬ್ಯಾಂಕಿಂಗ್ ಚಟುವಟಿಕೆಗಳನ್ನು ಕೈಗೊಳ್ಳದಂತೆ, ದಿನಾಂಕ:02-01-2020ರಂದು ನಿರ್ಬಂಧಿಸಿ ಆದೇಶಿಸಿರುತ್ತದೆ. ಈ ನಿರ್ಬಂಧವನ್ನು ದಿನಾಂಕ:01.01.2022 ರವರೆಗೆ ಮುಂದುವರೆಸಿರುತ್ತದೆ.

ಬ್ಯಾಂಕ್ ನೀಡಿರುವ ಸಾಲದಲ್ಲಿ ಶೇಕಡಾ 95% ರಷ್ಟು ಅನುತ್ಪಾದಕ ಆಸ್ತಿಗಳಾಗಿರುತ್ತವೆ. ರೂ.159474.82 ಗಳಷ್ಟು ಸಾಲವನ್ನು ಮೋಸ, ವಂಚನೆ ಎಂದು ಆರ್.ಬಿ.ಐನವರು ತಮ್ಮ ಪರಿವೀಕ್ಷಣಾ ವರದಿಯಲ್ಲಿ ಪರಿಗಣಿಸಿರುತ್ತಾರೆ.

ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ:02-01-2020 ರಂದು ಬ್ಯಾಂಕಿಂಗ್ ರೆಗ್ಯುಲೇಷನ್ ಆಕ್ಟ್ 1949 ರ ಪ್ರಕರಣ 35ರಡಿ ನಿರ್ದೇಶನ ನೀಡಿ ಪ್ರತಿ ಖಾತೆದಾರರಿಗೆ ಗರಿಷ್ಠ ರೂ.35,000/- ಪಾವತಿಸಲು ಆದೇಶಿಸಿತ್ತು. ಅದನ್ನು ಪರಿಷ್ಕರಿಸಿ ದಿನಾಂಕ:30-01-2020ರಲ್ಲಿ ರೂ: 1.00 ಲಕ್ಷಕ್ಕೆ ಹೆಚ್ಚಿಸಿರುತ್ತದೆ.

ದಿನಾಂಕ:15-04-2020ರ ಆದೇಶದಲ್ಲಿ ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆ ಇದ್ದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ನ ಪೂರ್ವಾನುಮತಿಯೊಂದಿಗೆ ರೂ.5.00 ಲಕ್ಷಗಳಿಗೆ ಹೆಚ್ಚಿಸಿರುತ್ತದೆ. ದಿನಾಂಕ:31.08.2021ರವರೆವಿಗೆ 780 ಗ್ರಾಹಕರಿಗೆ ರೂ.13.22 ಕೋಟಿಗಳನ್ನು ಪಾವತಿಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕಿನ ಸಲಹೆ ಮೇರೆಗೆ ದಿನಾಂಕ:18-05-2020 ರಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 30(6)ರಡಿಯಲ್ಲಿ ಆಡಳಿತಾಧಿಕಾರಿಯನ್ನಾಗಿ ಇಲಾಖಾಧಿಕಾರಿಯನ್ನು ಒಂದು ವರ್ಷದ ಅವಧಿಗೆ ನೇಮಿಸಲಾಗಿತ್ತು. ಸದರಿ ಆಡಳಿತಾಧಿಕಾರಿ ಪ್ರಭಾರ ವಹಿಸಿಕೊಂಡು ಬ್ಯಾಂಕಿನ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದರು. ಮಾನ್ಯ ಉಚ್ಛ ನ್ಯಾಯಾಲಯದ ನಿರ್ದೇಶನ ಹಾಗೂ ಆರ್.ಬಿ.ಐ. ಸಲಹೆಯ ಪ್ರಕಾರ ನಿವೃತ್ತ ಕೆನರಾ ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕರು ಹಾಗೂ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ಶ್ರೀ ಆರ್. ಅಶೋಕನ್‌ರವರನ್ನು ಆಡಳಿತಾಧಿಕಾರಿಯಾಗಿ ನೇಮಿಸಲಾಗಿದೆ. ಅವರು ದಿನಾಂಕ:10-11-2020ರಂದು ಪ್ರಭಾರ ವಹಿಸಿಕೊಂಡು ಕರ್ತವ್ಯದಲ್ಲಿ ಮುಂದುವರೆದಿರುತ್ತಾರೆ.

ಆಡಳಿತಾಧಿಕಾರಿಯವರಿಗೆ ಸೂಚನೆ ನೀಡಿ ಸಾಲ ವಸೂಲಾತಿಗೆ ಕ್ರಮ ಕೈಗೊಂಡು ಬ್ಯಾಂಕಿನ ಪುನಃಶ್ಚೇತನಕ್ಕೆ ಕಾರ್ಯಕ್ರಮ ರೂಪಿಸಿ ಕಾಲಬದ್ಧವಾಗಿ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಬ್ಯಾಂಕಿನ ಆಡಳಿತಾಧಿಕಾರಿಯವರು ಬ್ಯಾಂಕಿನ ಲೆಕ್ಕ ಪತ್ರಗಳ ಬಗ್ಗೆ ಕೆಳಕಂಡ ಮಾಹಿತಿಯನ್ನು ನೀಡಿರುತ್ತಾರೆ.

ಅ) ದಿನಾಂಕ:10.01.2020ರ ಅಂತ್ಯಕ್ಕೆ ಒಟ್ಟು ರೂ.1567 ಕೋಟಿ ಸಾಲ ಮತ್ತು ಮುಂಗಡಗಳ ಬಾಕಿ ಇದ್ದು, ದಿನಾಂಕ:31.08.2021ರ ಅಂತ್ಯಕ್ಕೆ ರೂ.182.22 ಕೋಟಿ ಸಾಲ ವಸೂಲಿಯಾಗಿದ್ದು ರೂ.1405 ಕೋಟಿ (ಬಡ್ಡಿ ಸೇರಿ) ವಸೂಲಾತಿಗೆ ಬಾಕಿ ಇರುತ್ತದೆ.

ಆ) ದಿನಾಂಕ:09.07.2021ರ ಆಯ್ಕೆ 38848 ಗ್ರಾಹಕರಿಗೆ ರೂ.2073.91 ಕೋಟಿ ಹಾಗೂ 994 ಸಾಂಸ್ಥಿಕ ಗ್ರಾಹಕರಿಗೆ ರೂ.375 ಕೋಟಿಗಳ ಠೇವಣಿ ಹಣವನ್ನು ಪಾವತಿಸಬೇಕಾಗಿದೆ.

ಇ) ದಿನಾಂಕ:10.01.2020 ರಿಂದ 31.08.2021ರವರೆವಿಗೂ 22653 ಗ್ರಾಹಕರಿಗೆ ರೂ.290.80 ಕೋಟಿ ಠೇವಣಾತಿ ಹಣವನ್ನು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದ ರೀತ್ಯಾ ಪಾವತಿಸಲಾಗಿದೆ.

ಬ್ಯಾಂಕಿನಲ್ಲಿ ದುರುಪಯೋಗ ಮತ್ತು ಅವ್ಯವಹಾರಗಳ ಬಗ್ಗೆ ಕೆಳಕಂಡ ಕ್ರಮ ಕೈಗೊಳ್ಳಲಾಗಿದೆ.

1. ಬ್ಯಾಂಕಿನ ಹಗರಣಕ್ಕೆ ಸಂಬಂಧಪಟ್ಟಂತೆ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗಿದೆ.
2. 2014-15 ರಿಂದ 2018-19ರವರೆಗಿನ ಮರು ಲೆಕ್ಕಪರಿಶೋಧನೆಗೆ ಆದೇಶಿಸಲಾಗಿದೆ.
3. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 64 ರ ವಿಚಾರಣೆಗೆ ಆದೇಶಿಸಲಾಗಿದೆ. ವಿಚಾರಣಾ ವರದಿ ನಿರೀಕ್ಷಿಸಲಾಗಿದೆ.
4. ಬ್ಯಾಂಕಿನಲ್ಲಿ ಹಣ ದುರುಪಯೋಗಕ್ಕೆ ಕಾರಣರಾದ ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗಿದೆ. ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

2019-20ನೇ ಸಾಲಿನ ಲೆಕ್ಕ ಪರಿಶೋಧನೆ ಪೂರ್ಣಗೊಂಡಿದ್ದು, ಸದರಿ ವರದಿಯ ಪ್ರಕಾರ ಬ್ಯಾಂಕ್ ರೂ.1923.00 ಕೋಟಿ ನಷ್ಟವನ್ನು ಹೊಂದಿರುತ್ತದೆ.

ಬ್ಯಾಂಕಿನ ಮರುಲೆಕ್ಕ ಪರಿಶೋಧನೆ ಪೂರ್ಣಗೊಂಡ ನಂತರ ವಾಸ್ತವಿಕ ಅಂಶಗಳು ಬೆಳಕಿಗೆ ಬರುತ್ತವೆ.

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ: 7350/2020ರಲ್ಲಿ ಮಾನ್ಯ ನ್ಯಾಯಾಲಯವು ಕಾಲಕಾಲಕ್ಕೆ ನೀಡಿರುವ ನಿರ್ದೇಶನಗಳನ್ನು ಪಾಲಿಸಲಾಗುತ್ತಿದೆ.

---

**ಕಡತ ಸಂಖ್ಯೆ: ಸಿಒ 74 ಸಿಆರ್‌ಸಿ 2021**

**(ಎಸ್. ಟಿ. ಸೋಮಶೇಖರ್)**
ಸಹಕಾರ ಸಚಿವರು
**S.T. SOMASHEKAR**
**MINISTER FOR CO-OPERTATION**